

# ಕೋಳಿ ಜುಟ್ಟು!



ಉಪ್ಪಿನಕಾಯಿ ಹಾಕಲು ಮತ್ತು ಅಡುಗೆಯಲ್ಲಿ ಹುಳಿಯ ರುಚಿಗಾಗಿ ಹಿಂದೆಲ್ಲಾ ಬಳಕೆಯಲ್ಲಿದ್ದ ಈ ಹಣ್ಣು ಈಗ ಕಾಣುವುದೇ ಇಲ್ಲ.

■ ಚಿತ್ರ-ಬರಹ: **ಡಾ.ಮನೋಜ ಗೋಡಬೋಲೆ**

ಕೇರಳ, ತಮಿಳುನಾಡು ಹಾಗೂ ನಮ್ಮದೇ ದಕ್ಷಿಣ ಕನ್ನಡ ಮತ್ತು ಕೊಡಗಿನ ನಿತ್ಯ ಹರಿದ್ವರ್ಣ ಕಾಡುಗಳಲ್ಲಿ ಎತ್ತರದ ಮರಗಳ ಕೆಳಗೆ ಪುಟ್ಟದಾಗಿ 15 ಮೀಟರ್ ಎತ್ತರದವರೆಗೂ ಬೆಳೆಯಬಲ್ಲ ಈ ಗಿಡದ ಕನ್ನಡದ ಹೆಸರು ಅಲ್ಲಿನ ನಿವಾಸಿಗಳ ಪ್ರಕಾರ ಕೋಳಿಜುಟ್ಟು! ಮಲಯಾಳಂನಲ್ಲಿ ಮೂತಪಳಮ್ ಅಥವಾ ಕೋಳಿ ಕುಕ್ಕೆ ಎನ್ನುತ್ತಾರೆ.

ಗೊಂಚಲುಗಳಲ್ಲಿ ಕಾಂಡದ ಬುಡದಿಂದ ತುದಿಯ ತನಕವೂ ತೊನೆ ತೊನೆದು ಬಿಡುವ ಕೆಂಪಾದ ಅತ್ಯಂತ ಆಕರ್ಷಕವಾದ ಈ ಹಣ್ಣುಗಳನ್ನು ಮಕ್ಕಳು ಇಷ್ಟಪಟ್ಟು ತಿನ್ನುತ್ತಾರೆ. ಹಾಗೆಯೇ ಕೋತಿಗಳಿಗೂ ಕೂಡ ಬೇಸಿಗೆಯಿಂದ ಹಿಡಿದು ಮಳೆಗಾಲದವರೆಗೂ ಈ ಹುಳಿ ಮಿಶ್ರಿತ ಸಿಹಿಯಾದ ಹಣ್ಣು ಅಚ್ಚುಮೆಚ್ಚು. ಹಣ್ಣನ್ನು ಬಿಡಿಸಿದರೆ ಒಳಗೆ ಮುರುಗಲು ಹಣ್ಣಿನ ಹಾಗೇ ಸೊಳೆಗಳು ಕಂಡು ಬರುತ್ತವೆ. ಆದರೆ ಒಳಗಿನ ಬೀಜದ ಗಾತ್ರ ಮಾತ್ರ ಸಣ್ಣ ಕುಂಬಳದ ಬೀಜದಂತಿರುತ್ತದೆ.

ಸಸ್ಯಶಾಸ್ತ್ರೀಯವಾಗಿ ಯುಫೋರ್ಬಿಯೇಸಿ ಕುಟುಂಬಕ್ಕೆ ಸೇರಿದ ಈ ಮರವು ನೆಲ್ಲಿ ಮರದ ದಾಯಾದಿ. ಉಪ್ಪಿನಕಾಯಿಗಾಗಿಯೂ, ಅಡುಗೆಗಳಲ್ಲಿ ಹುಳಿಯ ರುಚಿಗಾಗಿಯೂ ಒಂದೊಮ್ಮೆ ಬಳಕೆಯಲ್ಲಿದ್ದ ಈ ಮರವು ಇಂದು ಯಾರ ಗಮನಕ್ಕೂ ಅಷ್ಟಾಗಿ ಬರುತ್ತಿಲ್ಲ. ಬೀಜಗಳಿಂದ ಅನಾಯಾಸವಾಗಿ ಅಸಂಖ್ಯಾತ ಗಿಡಗಳು ಹುಟ್ಟುತ್ತವೆ. ಹಾಗಾಗಿ ಅಲಂಕಾರಿಕವಾಗಿಯೂ ಬೆಳೆಸಬಹುದೇನೋ? ■